# ತತ್ವ ಪದಗಳು ಸಮಾಜಕ್ಕೆ ಕನ್ನಡಿ; ಭವಿಷ್ಯಕ್ಕೆ ಮುನ್ನುಡಿ

ಮಾಧವ ಎಂ.ಕೆ.

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು.

DOI: https://doi.org/10.5281/zenodo.15795705

## ABSTRACT:

ತತ್ವಪದಗಳು ತಾತ್ವಿಕ ಬದುಕಿನ ಅನುಭವಗಳ ಸಾರಸಂಗ್ರಹವಾಗಿದೆ. ತತ್ವಪದಗಳು ಭಾರತೀಯ ಸಂಸ್ಕೃತಿಗೆ ಒಂದು ಕನ್ನಡಿಯಾಗಿ ನೈತಿಕ ಮೌಲ್ಯಗಳ ಪ್ರತಿಬಿಂಬವಾಗಿ ಗೋಚರಿಸುತ್ತವೆ. ತತ್ವಪದ ಎಂಬ ಸಾಹಿತ್ಯ ಪ್ರಕಾರವು ಜನರ ವರ್ಗ, ವರ್ಣ, ಜಾತಿ, ಲಿಂಗ ಭೇದಗಳನ್ನು ಮೀರಿ ನಿಂತ ಸಮನ್ವಯದ ಬದುಕಿಗೆ ಸಂದೇಶ ಸಾರುವ ಮಹತ್ವದ ಸಾಹಿತ್ಯ ಪ್ರಕಾರವಾಗಿದೆ ಎಂದು ತಿಳಿಯಬಹುದು.

ತತ್ವಪದಗಳು ಸಮಾಜದ ಲೋಪದೋಷಗಳ ಮೇಲೆ ಕನ್ನಡಿ ಹಿಡಿಯುವ ಕಾರ್ಯವನ್ನು ಮಾಡುವುದಲ್ಲದೆ ನೈತಿಕ ಮತ್ತು ಮಾನವಿಕ ನೆಲೆಯಲ್ಲಿ ಸಮಾಜವನ್ನು ವಿಂಗಡಿಸದೆ ಏಕತ್ರಗೊಳಿಸಿ ಮಾನವ ಸಂಬಂಧವನ್ನು ಛಿದ್ರಗೊಳ್ಳದಂತೆ ಭದ್ರಗೊಳಿಸುವ ನಿಟ್ಟಿನಲ್ಲಿ ಪ್ರೇರಣೆ ಹಾಗೂ ಶಕ್ತಿ ತುಂಬುವಲ್ಲಿ ಸಹಕರಿಸುತ್ತವೆ.

ಭಾಷೆ ಸಂಸ್ಕೃತಿ ಪರಂಪರೆಯ ವಾಹಕ. ಈ ರಚನೆಗಳು ಮೇಲುನೋಟಕ್ಕೆ 'ಕಾವ್ಯಾತ್ಮಕತೆ'ಯನ್ನು ಹೊಂದಿದಂತೆ ಕಾಣುವುದಿಲ್ಲ. ಈ ರಚನೆಯ ಶಾಬ್ದಿಕ ಮಾಧ್ಯಮವು ಗಾಯನದೊಂದಿಗೆ ಹೊಸ ಸಂವಿಧಾನವನ್ನು ಪಡೆದುಕೊಳ್ಳುತ್ತದೆ. ಸಾಮಾನ್ಯ ಅನುಭವಗಳಿಂದ ಬೇರೆಯಾದ ಅನುಭವಗಳನ್ನು ಬೇರೆಯಾದ ಅನುಭವಗಳನ್ನು ನಾವು ಪಡೆಯುವುದು ಭಾಷೆಯ ಮಾಧ್ಯಮದಿಂದ ಮಾತ್ರ ಸಾಧ್ಯ. ಆಗ ಭಾಷೆಯ ಸ್ವರೂಪ ಸಾಮಾನ್ಯ ಸ್ವರೂಪದ್ದಾಗಿರದೆ ವಿಶಿಷ್ಟವಾಗುತ್ತದೆ. ಸಾಮಾನ್ಯ ಭಾಷೆಯಿಂದ ಬೇರೆಯಾದ ಭಾಷಾಪ್ರಯೋಗದ ಕೌಶಲ ಒಂದು ಹಂತದ ಕಾವ್ಯಾತ್ಮಕತೆಯನ್ನು ಖಚಿತಗೊಳಿಸುತ್ತದೆ. ಅನುಭವದ ಕಥನಾತ್ಮಕವಾದ ಅಂಶವನ್ನು ಭಾಷೆಯ ಮತ್ತು ಛಂದೋವಿಧಾನದ ಲಕ್ಷಣದೊಂದಿಗೆ ಹೊಂದಿಸುವ ಅಭಿನ್ನವಾದ ಸಂಬಂಧವನ್ನು ಈ ಗೀತೆಗಳಲ್ಲಿ ಕಾಣುತ್ತೇವೆ. ಆದ್ದರಿಂದ ಇಲ್ಲಿ ಬಳಕೆಯಾಗುವ ಭಾಷಿಕ ವಿನ್ಯಾಸವು ಬಹುಮುಖಿಯಾದುದು.

ತತ್ವಪದಗಳು ಜನಸಾಮಾನ್ಯರಿಗೆ ಬದುಕಿನ ಬಗ್ಗೆ ಅರಿವು; ಆಧ್ಯಾತ್ಮಿಕ ಅರ್ಥ ನೀಡುತ್ತವೆ. ಅವುಗಳು ಜನರನ್ನು ನೈತಿಕ ಮಾರ್ಗದಲ್ಲಿ ನಡೆಯಲು ಬಲ ನೀಡುತ್ತವೆ. ತತ್ವಪದಕಾರರನ್ನು ಬಂಡಾಯ ಮನೋಧರ್ಮದ ಸ್ಥಾಪಕರೆಂದು ಭಾವಿಸುವುದುಂಟು. ಅವುಗಳಲ್ಲಿ ಮೌಲಿಕ ಅಂಶಗಳು ತುಂಬಿಕೊಂಡಿರುವುದು ನಮಗೆ ಗೋಚರಿಸುತ್ತದೆ. 17ನೇ ಶತಮಾನದಿಂದ ಕಂಡು ಬರುವ ತತ್ವಪದಕಾರರು ಆ ಹಿಂದಿನ ತತ್ವಪದಕಾರರಿಗಿಂತ ಭಿನ್ನವಾಗಿರುವುದನ್ನು ಗುರುತಿಸಬಹುದು.

ತತ್ವಪದಗಳು ಸಮಾಜದ ಅಂಕುಡೊಂಕುಗಳಿಗೆ ಕನ್ನಡಿಯಾಗಿ ಸದ್ಭವಿಷ್ಯಕ್ಕೆ

ಮುನ್ನುಡಿ ಬರೆಯುವಲ್ಲಿ ಪ್ರಭಾವ ಬೀರಿರುವುದನ್ನು ನಾವು ಗಮನಿಸಬಹುದಾಗಿದೆ. ತತ್ವ ಎಂದರೆ ಅದು ಲೌಕಿಕ ಜಗತ್ತಿನ ವಸ್ತುವಿಷಯಗಳನ್ನು ಪಾರಲೌಕಿಕ ಮತ್ತು ಸಾರಸತ್ವದ ಸಾರ್ವಕಾಲಿಕ ನೆಲೆಯಲ್ಲಿ ಜನಸಾಮಾನ್ಯರಲ್ಲೂ ಜಾಗೃತಿ, ವಿವೇಕ, ಆಧ್ಯಾತ್ಮಿಕ ಚಿಂತನೆ ಒಟ್ಟಿನಲ್ಲಿ ಲೋಕಹಿತಕಾರಿ ಜನಸಮುದಾಯವನ್ನು ಸೃಷ್ಟಿಸುವ ಹಾಗೂ ಅದಕ್ಕಾಗಿ ಪ್ರೇರಣೆ ನೀಡುವ ಮಹತ್ಕಾರ್ಯವನ್ನು ನಿರ್ವಹಿಸುತ್ತದೆ.

## KEYWORDS:

ತತ್ವಪದ, ಸಾಹಿತ್ಯ, ಭಾಷೆ, ಸಮಾಜ, ಶಿಶುನಾಳ, ತಾತ್ವಿಕ, ತತ್ವಪದಗಾರ್ತಿ.

ಸರಿಸುಮಾರು ಹದಿನೈದನೆ ಶತಮಾನದ ಅನಂತರದ ಸಾಹಿತ್ಯದಲ್ಲಿ 'ತತ್ವಪದ'ಗಳೆಂಬ ಸಾಹಿತ್ಯ ಪ್ರಕಾರವು ತನ್ನದೇ ಆದ ವಿಶಿಷ್ಟತೆ, ವಿಭಿನ್ನತೆಯನ್ನು ಹೊಂದಿರುವ ಸಾಹಿತ್ಯವಾಗಿ ಹೊರಹೊಮ್ಮಿದೆ. ಒಂದು ದೃಷ್ಟಿಯಿಂದ ಗಮನಿಸಿದರೆ ವಚನ ಸಾಹಿತ್ಯದ ಆದರ್ಶ, ಮೌಲ್ಯಗಳು ಸೇರಿದಂತೆ ಕನ್ನಡ ಸಾಹಿತ್ಯಕ್ಕೆ ನವ ಚೈತನ್ಯವನ್ನು ಮತ್ತು ಸಮಕಾಲೀನ ಜನಜೀವನಕ್ಕೆ ಆಧ್ಯಾತ್ಮಿಕತೆಯನ್ನು ತಂದುಕೊಟ್ಟ ಸಾಹಿತ್ಯ ಪ್ರಕಾರವೇ 'ತತ್ವಪದ'ಗಳಾಗಿವೆ.

ತತ್ವಪದಗಳು ತಾತ್ವಿಕ ಬದುಕಿನ ಅನುಭವಗಳ ಸಾರಸಂಗ್ರಹವಾಗಿದೆ. ತತ್ವಪದಗಳು ಭಾರತೀಯ ಸಂಸ್ಕೃತಿಗೆ ಒಂದು ಕನ್ನಡಿಯಾಗಿ ನೈತಿಕ ಮೌಲ್ಯಗಳ ಪ್ರತಿಬಿಂಬವಾಗಿ ಗೋಚರಿಸುತ್ತವೆ. ತತ್ವಪದ ಎಂಬ ಸಾಹಿತ್ಯ ಪ್ರಕಾರವು ಜನರ ವರ್ಗ, ವರ್ಣ, ಜಾತಿ, ಲಿಂಗ ಭೇದಗಳನ್ನು ಮೀರಿ ನಿಂತ ಸಮನ್ವಯದ ಬದುಕಿಗೆ ಸಂದೇಶ ಸಾರುವ ಮಹತ್ವದ ಸಾಹಿತ್ಯ ಪ್ರಕಾರವಾಗಿದೆ ಎಂದು ತಿಳಿಯಬಹುದು.

ತತ್ವಪದಗಳು ಸಮಾಜದ ಲೋಪದೋಷಗಳ ಮೇಲೆ ಕನ್ನಡಿ ಹಿಡಿಯುವ ಕಾರ್ಯವನ್ನು ಮಾಡುವುದಲ್ಲದೆ ನೈತಿಕ ಮತ್ತು ಮಾನವಿಕ ನೆಲೆಯಲ್ಲಿ ಸಮಾಜವನ್ನು ವಿಂಗಡಿಸದೆ ಏಕತ್ರಗೊಳಿಸಿ ಮಾನವ ಸಂಬಂಧವನ್ನು ಛಿದ್ರಗೊಳ್ಳದಂತೆ ಭದ್ರಗೊಳಿಸುವ ನಿಟ್ಟಿನಲ್ಲಿ ಪ್ರೇರಣೆ ಹಾಗೂ ಶಕ್ತಿ ತುಂಬುವಲ್ಲಿ ಸಹಕರಿಸುತ್ತವೆ.

ಜನರ ಬದುಕನ್ನು ಹಸನುಗೊಳಿಸುವ ಸಾಹಿತ್ಯದ ಮುಖ್ಯ ಕಾರ್ಯವೆಂದು ನಂಬಿದ ತತ್ವಪದಕಾರರು ಅವರ ಪರಿಭಾಷೆಯಲ್ಲಿ ಸಾಹಿತ್ಯ ರಚಿಸಿದರು. ಇವರು ಸೃಷ್ಟಿಸಿದ ಸಾಹಿತ್ಯಿಕ ಭಾಷೆ ಪ್ರಾದೇಶಿಕ ನೆಲೆಯನ್ನು ಪಡೆದಿತ್ತು. ಸಾಮಾನ್ಯ ಜನರು ಬಳಸುವ ಭಾಷೆಯನ್ನು ತಮ್ಮ ಸಾಹಿತ್ಯ ರಚನೆಯ ಭಾಷೆಯನ್ನಾಗಿ ಬಳಸುವುದರ ಮೂಲಕ ಅವರ ಬವಣೆಗಳಿಗೆ ಸ್ಪಂದಿಸಿದರು. ಪ್ರಭುತ್ವ, ಧರ್ಮ, ಅಧಿಕಾರ, ಸಂಪತ್ತು ಹೇಗೆ ಜನರ ಬದುಕಿನ ಮೇಲೆ ಸವಾರಿ ಮಾಡುತ್ತದೆ ಎಂಬುದನ್ನು ತಮ್ಮ ಸಾಹಿತ್ಯದಲ್ಲಿ ಅಭಿವ್ಯಕ್ತಗೊಳಿಸಿದರು. ಹಿಂಸೆಯ ವಿವಿಧ ಆಯಾಮಗಳನ್ನು ತಮ್ಮ ಸಾಹಿತ್ಯದಲ್ಲಿ

ಶೋಧಿಸಿದರು. ಮುಖ್ಯವಾಗಿ ಆಡಳಿತದ ಜನ ವಿರೋಧಿ ನೀತಿಯನ್ನು ತಮ್ಮದೇ ಸಾಮಾಜಿಕ ಪರಿಭಾಷೆಯಲ್ಲಿ ವಿರೋಧಿಸುವ ಸಾಹಿತ್ಯವನ್ನು ಸೃಷ್ಟಿಸಿದರು.

ತತ್ವ ಪದಗಳೆಂಬ ಸಾಹಿತ್ಯವನ್ನು ರಚಿಸಿದವರು ಹೆಚ್ಚಾಗಿ ಅನಕ್ಷರಸ್ಥರು. ಸಾಮಾಜಿಕವಾಗಿ 'ಅತ್ಯಂತ ಕೀಳು' ಎಂದು ಭಾವಿಸಿದ ಜನವರ್ಗದಿಂದ ಬಂದವರು. ಮೇಧಾವಿಗಳು ಸೃಷ್ಟಿಸುತ್ತಿದ್ದ ಸಾಹಿತ್ಯ ಜನರಿಂದ ದೂರ ಇರುವಾಗ ಇವರು ಅದನ್ನು ಅವರಿಗೆ ಹತ್ತಿರ ತಂದರು. ಸಾಹಿತ್ಯ ರಚನೆಗೆ ಬೇಕಾದ ಮೀಮಾಂಸೆಯ ಚಾರಿತ್ರಿಕ ಧೋರಣೆಯನ್ನು ನಂಬದೆ ತಮ್ಮದೇ ನೆಲೆಯ 'ಕಾವ್ಯಲಯ'ವನ್ನು ಕಂಡುಕೊಂಡರು. ಈ ಕಾವ್ಯ ಲಯವು ಹೊಸ ಕಾವ್ಯ ಭಾಷೆಯ ಹುಟ್ಟಿಗೂ ಕಾರಣವಾಯಿತು. ಆ ಭಾಷೆಯ ಸಾಮಾಜಿಕ ಪ್ರತಿನಿಧಿಯಾಗಿ ಕಾರ್ಯವೆಸಗುವಂತೆ ಮಾಡಿದರು. ಹೀಗಾಗಿ ಅವರ ಸಾಹಿತ್ಯದ ಅಧ್ಯಯನವೆಂದರೆ ಆ ಕಾಲದ ಜನರ ಜೀವನವನ್ನು ಅಧ್ಯಯನ ಮಾಡಿದಂತೆ. ಇವರಷ್ಟು ಖಚಿತವಾಗಿ ಜನರೊಂದಿಗೆ ಕೂಡಿಕೊಂಡು ಸಾಹಿತ್ಯ ರಚನೆ ಮಾಡಿದ ಸಂದರ್ಭಗಳು ಬೇರೆ ಸಿಗದು. ಇವರ ಸಾಹಿತ್ಯಿಕ ದೃಷ್ಟಿಕೋನವನ್ನು ಶೋಧಿಸುವುದು ಚಾರಿತ್ರಿಕವಾಗಿ ಮುಖ್ಯವಾದ ಸಂಗತಿಯಾಗಿದೆ.

ಮುಖ್ಯವಾಗಿ ಇವರ ಸಾಹಿತ್ಯ ವಸಾಹತುಶಾಹಿಯಿಂದ ವಿನಾಶವಾಗುತ್ತಿದ್ದ ಸಾಮಾಜಿಕ ಜೀವನಗತಿಯನ್ನು ಒಳಗೊಂಡಿದೆ. ಇದರಿಂದ ಪಾರಾಗುವ ಬಗೆಯನ್ನು ಚಿಂತಿಸುತ್ತದೆ. ಈ ಚಿಂತನೆಯು ಜನರಾಡುವ ಭಾಷೆಯನ್ನು ನಂಬಿಕೊಂಡಿದೆ. ಇವರು ಬಳಸುವ ಭಾಷೆ ಜನರು ಉಸಿರಾಡುವಂಥದ್ದು. ಅವರ ಜೀವನ ವಿಧಾನವನ್ನು ಪ್ರತಿಬಿಂಬಿಸುವಂಥದ್ದು. ಹೀಗಾಗಿ ಇವರ ಸಾಹಿತ್ಯದ ಅಧ್ಯಯನ ನಿರ್ನಾಮವಾಗುತ್ತಿರುವ ಸಾಮಾಜಿಕ ಜೀವನ ವಿಧಾನದ ಅಧ್ಯಯನವು ಆಗುತ್ತದೆ. ಇವರ ಸಾಹಿತ್ಯದಲ್ಲಿ ಕಾಣಿಸುವ ಸಮಾಜ ದಮನಕ್ಕೀಡಾಗುತ್ತಿರುವ ಸಮಾಜವೇ ಆಗಿದೆ. ಜೊತೆಗೆ ಜಾತ್ಯತೀತವಾದ ಮಾನವೀಯತೆಯ ನೆಲೆಯನ್ನು ಅವರ ಸಾಹಿತ್ಯದಲ್ಲಿ ಕಾಣುತ್ತೇವೆ.

ಅವರ ಕಾವ್ಯ ಜೀವಂತಿಕೆಯನ್ನು ಪಡೆಯುವುದು ಅನುಭವಗಳ ನೆಲೆಯಿಂದ. ತಮ್ಮ ಪರಿಸರದಲ್ಲಿರುವ ವಸ್ತುಗಳಿಂದ ಪ್ರತಿಮೆ ರೂಪಕಗಳನ್ನು ಪಡೆದುಕೊಂಡು ಕಾವ್ಯಕ್ಕೆ ಹೊಸ ಬನಿಯನ್ನು ನೀಡುತ್ತಾರೆ. ಲೌಕಿಕವನ್ನು ಮೀರುವ ಇವರ ಧೋರಣೆಗೆ ಜನರ ಭಾಷೆ ಸಂವಾದಿಯಾಗಿರುತ್ತದೆ. ಅವರು ನಿತ್ಯ ಬಳಸುವ ಭಾಷೆಯನ್ನೇ ಕಾವ್ಯದ ಭಾಷೆಯನ್ನಾಗಿ ಬಳಸುತ್ತಾರೆ. ಅದರ ಮೂಲಕ ಧ್ಯಾನಶೀಲ ತತ್ವವನ್ನು ಸೃಷ್ಟಿಸುತ್ತಾರೆ. ಈ ತತ್ವವು ಮನುಷ್ಯ ಸ್ವಭಾವಗಳ ಶೋಧವೂ ಆಗಿರುತ್ತದೆ. ಸ್ವಪ್ರಜ್ಞೆ ಮತ್ತು ಸಾಮಾಜಿಕ ಪ್ರಜ್ಞೆಯನ್ನು ಸಂಯೋಗಗೊಳಿಸುವ ಧೋರಣೆ ಇವರ ಕಾವ್ಯದಲ್ಲಿದೆ. ಆದ್ದರಿಂದ ಕಾವ್ಯದಲ್ಲಿ ಬಳಕೆಯಾಗುವ ಭಾಷೆಯನ್ನು ಕುರಿತು ಅಧ್ಯಯನ ಮಾಡುವುದು ಜನತೆಯ ಜೀವನವನ್ನು ತಿಳಿಯುವುದಕ್ಕೆ ದಾರಿ ಮಾಡಿಕೊಡುತ್ತದೆ.

ಈ ತತ್ವಪದಗಳು ಮನುಷ್ಯನ ಸುಖ–ಸಂತೋಷ, ದುಃಖ–ದುಮ್ಮಾನ, ಬದುಕಿನ ನಶ್ವರತೆ, ಅಮರತ್ವದ ಅನೇಕ ಅರ್ಥಗಳು ಆಂತರಿಕ ಭೂಮಿಕೆಯಲ್ಲಿ ಅಭಿವ್ಯಕ್ತಗೊಳಿಸುತ್ತವೆ. ವೈಜ್ಞಾನಿಕ ಬೆಳವಣಿಗೆಯು ಸೃಷ್ಟಿಸುವ ಸಮಸ್ಯೆಗಳನ್ನು ಕಾವ್ಯದಲ್ಲಿ ಕಾಣುತ್ತೇವೆ. ವಿಜ್ಞಾನದ ಬೆಳವಣಿಗೆಯು ಗ್ರಾಮೀಣ ಜನತೆಯಲ್ಲಿ ಸೃಷ್ಟಿಸಿದ ಬಿಕ್ಕಟ್ಟುಗಳನ್ನು ಕಾವ್ಯ ಒಳಗೊಂಡಿದೆ. ಮುಖ್ಯವಾಗಿ ಸಮಾಜ ನೈತಿಕವಾಗಿ ಮುನ್ನಡೆಯಬೇಕಾದ ನೀತಿಯನ್ನು ಅವರು ಪ್ರತಿಪಾದಿಸುತ್ತಾರೆ. ಇದು ಸಮಾಜದ ಆರೋಗ್ಯಪೂರ್ಣ ಬೆಳವಣಿಗೆಯ ದೃಷ್ಟಿಯಿಂದ ಮುಖ್ಯವಾದುದು. ಇಂತಹ ಜೀವನದ ಬವಣೆಗಳನ್ನು ಚರಿತ್ರೆ ನಮಗೆ ಕಟ್ಟಿಕೊಡುವುದಿಲ್ಲ. ಸಾಹಿತ್ಯದ ಮುಖೇನ ಇದನ್ನು ನಾವು ಕಂಡುಕೊಳ್ಳಬೇಕಾಗುತ್ತದೆ. ಅದಕ್ಕೆ ತತ್ವಪದಗಳು ಜನರ ಸಾಮಾಜಿಕ ಅಧ್ಯಯನಕ್ಕೆ ಮುಖ್ಯ ಆಕರವಾಗುತ್ತವೆ.

ಈ ಪದಗಳು ಗಾಯನದ ಲಯವನ್ನು ಹೊಂದಿವೆ. ಈ ಲಯಕ್ಕೆ ಮುಖ್ಯ ಪ್ರೇರಣೆ ಜನರು ಸೃಷ್ಟಿಸಿದ ಮೌಖಿಕ ಕಾವ್ಯಗಳು. ಈ ಕಾವ್ಯಗಳಲ್ಲಿ ಕಾಣುವ ಲಯಗಾರಿಕೆ ಮತ್ತು ಪದಗಳಲ್ಲಿ ಕಾಣುವ ಲಯಗಾರಿಕೆಯ ಸಂಬಂಧವನ್ನು ಶೋಧಿಸುವುದು ಮುಖ್ಯ. ಇದರಿಂದ ಜನರ ಗಾಯನ ಪರಂಪರೆಯನ್ನು ಕಂಡುಕೊಂಡಂತೆ ಆಗುತ್ತದೆ. ಅವು ಕಾವ್ಯದ ಮೇಲೆ ಬೀರಿದ ಪರಿಣಾಮವನ್ನು ಅಧ್ಯಯನ ಮಾಡಿದಂತೆ ಆಗುತ್ತದೆ.

ಕಲ್ಯಾಣ ಚಾಲುಕ್ಯರ ಅನಂತರ ಅಧಿಕಾರಕ್ಕೆ ಬಂದ ಕಲಚೂರ್ಯರು(1162–1184) ಕಲ್ಯಾಣವನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡರು. ಸುಮಾರು 26 ವರ್ಷಗಳ ಕಾಲ ರಾಜ್ಯವಾಳಿದರು. ಈ ವಂಶದಲ್ಲಿ ಪ್ರಸಿದ್ಧನಾದ ಬಿಜ್ಜಳನು ಬಸವಣ್ಣನನ್ನು ಮಂತ್ರಿಯಾಗಿಸಿದ್ದ. ಬಸವಣ್ಣನ ನೇತೃತ್ವದಲ್ಲಿ ಹೊಸ ಧಾರ್ಮಿಕ ಜೀವನ ಕ್ರಮವೊಂದು ರೂಪಿತವಾಯಿತು. ಇಲ್ಲಿನ ಸಾಂಸ್ಕೃತಿಕ ಸಂಘರ್ಷಗಳು, ಇದರಿಂದಾದ ಬದಲಾವಣೆಗಳು, ಪರಿಣಾಮಗಳು, ಕರ್ನಾಟಕದ ಮಧ್ಯಯುಗೀನ ಚರಿತ್ರೆಯನ್ನು ವಿಭಿನ್ನವಾಗಿಸಿದೆ, ಅನನ್ಯವಾಗಿಸಿದೆ.

ಭಾಷೆ ಸಂಸ್ಕೃತಿ ಪರಂಪರೆಯ ವಾಹಕ. ಈ ರಚನೆಗಳು ಮೇಲುನೋಟಕ್ಕೆ 'ಕಾವ್ಯಾತ್ಮಕತೆ'ಯನ್ನು ಹೊಂದಿದಂತೆ ಕಾಣುವುದಿಲ್ಲ. ಈ ರಚನೆಯ ಶಾಬ್ದಿಕ ಮಾಧ್ಯಮವು ಗಾಯನದೊಂದಿಗೆ ಹೊಸ ಸಂವಿಧಾನವನ್ನು ಪಡೆದುಕೊಳ್ಳುತ್ತದೆ. ಸಾಮಾನ್ಯ ಅನುಭವಗಳಿಂದ ಬೇರೆಯಾದ ಅನುಭವಗಳನ್ನು ಬೇರೆಯಾದ ಅನುಭವಗಳನ್ನು ನಾವು ಪಡೆಯುವುದು ಭಾಷೆಯ ಮಾಧ್ಯಮದಿಂದ ಮಾತ್ರ ಸಾಧ್ಯ. ಆಗ ಭಾಷೆಯ ಸ್ವರೂಪ ಸಾಮಾನ್ಯ ಸ್ವರೂಪದ್ದಾಗಿರದೆ ವಿಶಿಷ್ಟವಾಗುತ್ತದೆ. ಸಾಮಾನ್ಯ ಭಾಷೆಯಿಂದ ಬೇರೆಯಾದ ಭಾಷಾಪ್ರಯೋಗದ ಕೌಶಲ ಒಂದು ಹಂತದ

ಕಾವ್ಯಾತ್ಮಕತೆಯನ್ನು ಖಚಿತಗೊಳಿಸುತ್ತದೆ. ಅನುಭವದ ಕಥನಾತ್ಮಕವಾದ ಅಂಶವನ್ನು ಭಾಷೆಯ ಮತ್ತು ಛಂದೋವಿಧಾನದ ಲಕ್ಷಣದೊಂದಿಗೆ ಹೊಂದಿಸುವ ಅಭಿನ್ನವಾದ ಸಂಬಂಧವನ್ನು ಈ ಗೀತೆಗಳಲ್ಲಿ ಕಾಣುತ್ತೇವೆ. ಆದ್ದರಿಂದ ಇಲ್ಲಿ ಬಳಕೆಯಾಗುವ ಭಾಷಿಕ ವಿನ್ಯಾಸವು ಬಹುಮುಖಿಯಾದುದು.

17ನೇ ಶತಮಾನದ ಅನಂತರದ ಅವಧಿಯ ತತ್ವಪದಕಾರರಲ್ಲಿ ಯಾವುದೇ ನಿರ್ದಿಷ್ಟ ಮತ, ಪಂಥ, ವರ್ಗ, ವರ್ಣ ಎಂದು ಪ್ರತ್ಯೇಕಿಸಲಾಗದು. ಸಮಾಜದ ಎಲ್ಲ ಸ್ತರಗಳಿಂದ ತತ್ವಪದಕಾರರು ಹುಟ್ಟಿ ಬಂದಿರುವುದನ್ನು ಕಾಣಬಹುದು. ಹದಿನೇಳನೆಯ ಶತಮಾನವು ರಾಜಕೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಸಂಕಷ್ಟದ ಕಾಲವಾಗಿತ್ತು. ಆ ಕಾಲಘಟ್ಟದಲ್ಲಿ ಜನರಿಗೆ ಸರಿಯಾದ ಸಾಮಾಜಿಕ ಭದ್ರತೆಯಿರಲಿಲ್ಲ. ಆಳುವವರಿಂದ ಸಮಾಜದಲ್ಲಿ ಪ್ರತಿಷ್ಠಿತ ಎನಿಸಿಕೊಂಡವರಿಂದ ಸಾಮಾನ್ಯ ಜನರ ಕೌಟುಂಬಿಕ ಬದುಕು ಹದಗೆಟ್ಟಿತ್ತು. ಇಂತಹ ಕಾಲದಲ್ಲಿ ತತ್ವಪದಕಾರರು ತಮ್ಮ ಆಧ್ಯಾತ್ಮಿಕ ಮಾತುಗಳಿಂದ ಜನರ ಮನಸ್ಸುಗಳಿಗೆ ನೆಮ್ಮದಿಯನ್ನುಂಟು ಮಾಡಲು ಶ್ರಮಿಸುತ್ತಿದ್ದರು. ತತ್ವಪದಕಾರರ ಅನೇಕ ಪದಗಳಿಗೆ ಒಂದು ಹಿನ್ನೆಲೆ ಇರುವುದನ್ನು ಗಮನಿಸಬಹುದು. ಅದರ ಹಿಂದೆ ಒಂದು ಘಟನೆ ಕಾರಣವಾಗಿರುವ ಸಾಧ್ಯತೆ ಇರುತ್ತದೆ. ಇದನ್ನು ಅರಿಯುವ ಕಾರ್ಯ ನಡೆಯಬೇಕಾಗಿದೆ. ತತ್ವಪದಕಾರರೆಂದರೆ ಅವರು ಒಂದು ರೀತಿಯಲ್ಲಿ ಆಶುಕವಿಗಳೆಂದೇ ಹೇಳಬಹುದು. ಜನಸಾಮಾನ್ಯರ ನಡುವೆ ನಿಂತು ಅಲ್ಲಿನ ಆಗುಹೋಗುಗಳಿಗೆ ಸ್ಪಂದಿಸುವ ಮೂಲಕ ಅವರು ಹಾಡುಗಳನ್ನು ಕಟ್ಟಿದರು. ಇವೇ ತತ್ವಪದಗಳಾಗಿ ಜನಮನ್ನಣೆ ಪಡೆಯತೊಡಗಿದವು.

ತತ್ವಪದಗಳು ಜನಸಾಮಾನ್ಯರಿಗೆ ಬದುಕಿನ ಬಗ್ಗೆ ಅರಿವು; ಆಧ್ಯಾತ್ಮಿಕ ಅರ್ಥ ನೀಡುತ್ತವೆ. ಅವುಗಳು ಜನರನ್ನು ನೈತಿಕ ಮಾರ್ಗದಲ್ಲಿ ನಡೆಯಲು ಬಲ ನೀಡುತ್ತವೆ. ತತ್ವಪದಕಾರರನ್ನು ಬಂಡಾಯ ಮನೋಧರ್ಮದ ಸ್ಥಾಪಕರೆಂದು ಭಾವಿಸುವುದುಂಟು. ಅವುಗಳಲ್ಲಿ ಮೌಲಿಕ ಅಂಶಗಳು ತುಂಬಿಕೊಂಡಿರುವುದು ನಮಗೆ ಗೋಚರಿಸುತ್ತದೆ. 17ನೇ ಶತಮಾನದಿಂದ ಕಂಡು ಬರುವ ತತ್ವಪದಕಾರರು ಆ ಹಿಂದಿನ ತತ್ವಪದಕಾರರಿಗಿಂತ ಭಿನ್ನವಾಗಿರುವುದನ್ನು ಗುರುತಿಸಬಹುದು.

ತತ್ವಪದಕಾರರು ಇಂದಿನ ಸಮಾಜಕ್ಕೂ ಅತ್ಯಂತ ಪ್ರಸ್ತುತವೆನಿಸುತ್ತಾರೆ. ತತ್ವಪದಕಾರರು ಕರಾವಳಿ ಪ್ರದೇಶವನ್ನು ಬಿಟ್ಟು ಕರ್ನಾಟಕದ ಇತರ ಎಲ್ಲ ಭಾಗಗಳಲ್ಲಿ ಕಂಡು ಬರುತ್ತಾರೆ. ಉತ್ತರ ಕರ್ನಾಟಕದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಇವರ ಸಂಖ್ಯೆ ಅಧಿಕ.

ತತ್ವಪದಗಳು ಹುಟ್ಟಿದ ಬದುಕಿನ ಗತಿಯೇ ಭಿನ್ನವಾದುದು. ವ್ಯಕ್ತಿ ಮತ್ತು ಸಮುದಾಯದ ಬಾಂಧವ್ಯ, ವ್ಯಕ್ತಿತ್ವ ವಿಕಸನ, ಸಮುದಾಯದ ಮಾನಸಿಕ ಸ್ವಾಸ್ಥ್ಯ

ಮೊದಲಾದ ಅಂಶಗಳು ತತ್ವಪದಗಳಿಗೆ ವಸ್ತುಗಳಾಗಿವೆ.

ಹಾಡುಗಳಾಗಿ, ಸರಳ ತತ್ವ ನಿರೂಪಣೆ ಹಾಗೂ ವಿಷಯ ಪ್ರತಿಪಾದನೆಯ ವಿಶಿಷ್ಟತೆಯಿಂದಾಗಿ ಗಂಭೀರ ಚಿಂತನೆಯನ್ನು ಪ್ರಚೋದಿಸುವ ಶಕ್ತಿ ತತ್ವಪದಗಳಲ್ಲಿವೆ. ಅದಕ್ಕಾಗಿಯೇ ತತ್ವಪದಗಳನ್ನು ವಿಶಾಲವಾದ ಅರ್ಥದಲ್ಲಿ ಧಾರ್ಮಿಕ ಪಥ್ಯಗಳು, ಭಕ್ತಿ ಚಳವಳಿಯ ಚಿಂತನೆ, ತತ್ವ ಮತ್ತು ಮೌಲ್ಯಗಳನ್ನು ವ್ಯಾಪಕವಾಗಿ ಹಬ್ಬಿಸಲು ನೆರವಾಗುವ ಶಾಬ್ದಿಕ ರಚನೆಗಳು ಎಂದು ಅಭಿಪ್ರಾಯಿಸಲಾಗಿದೆ.

ಹೊಸಗನ್ನಡ ಕಾವ್ಯ ಆರಂಭಗೊಂಡಿದ್ದು ತತ್ವಪದಕಾರರಿಂದ. ಇವರು ಕನ್ನಡದಲ್ಲಿ ಮೊದಲ ಬಾರಿಗೆ ಜನರ ಮಧ್ಯದಿಂದ ಬಂದವರು. ಜನರ ಭಾಷೆಯನ್ನು ಬಳಸಿದವರು. ಸಾಮೂಹಿಕ ಹಿತ ಚಿಂತನೆಯನ್ನು ಮಾಡಿದವರು. ಜನರ ಬವಣೆಗಳನ್ನು ಹಾಡನ್ನಾಗಿಸಿದವರು. ಜನರ ನೋವು ನಲಿವುಗಳಿಗೆ ಸ್ಪಂದಿಸಿದವರು. ತಾವು ಶುದ್ಧವಾಗಿ ಸಮಾಜವನ್ನು ಶುದ್ಧಗೊಳಿಸಲು ಪ್ರಯತ್ನಿಸಿದವರು. ಆದ್ದರಿಂದ ಇವರೇ ಹೊಸಗನ್ನಡ ಕಾವ್ಯವನ್ನು ಆರಂಭಿಸಿದವರು ಎನ್ನಬಹುದು.

ಕನ್ನಡದಲ್ಲಿ ತತ್ವಪದಗಳನ್ನು ಅನೇಕ ಹೆಸರುಗಳಿಂದ ಕರೆದು ಗುರುತಿಸುವುದನ್ನು ಕಾಣಬಹುದು. ಕನ್ನಡ ತತ್ವಪದಗಳನ್ನು ರಚಿಸಿದವರಲ್ಲಿ ವಿವಿಧ ಮತಧರ್ಮಗಳಿಗೆ ಸೇರಿದ ನೂರಾರು ಜನರಿದ್ದರೂ ಹೆಚ್ಚಿನ ಸಂಖ್ಯೆಯವರು ವೀರಶೈವ ಭಕ್ತಿ ಚಳವಳಿಯಿಂದ ಪ್ರಚೋದಿತರಾದವರು. ಹನ್ನೆರಡನೆಯ ಶತಮಾನದ ಸಾಮಾಜಿಕ ಸಾಂಸ್ಕೃತಿಕ ಚಳವಳಿಯ ಪ್ರಭಾವ ಮುಂದಿನ ಶತಮಾನಗಳಲ್ಲಿ ಕನ್ನಡದ ಬದುಕಿನ ಮೇಲೆ ಅನೇಕ ರೀತಿಯ ಪರಿಣಾಮಗಳನ್ನು ಬೀರಿತು. ಶಾಬ್ದಿಕ ರಚನೆಗಳಲ್ಲಿ ಅನೇಕ ದೇಸಿ ರೂಪಗಳು ಕಂಡು ಬಂದವು. ಅಷ್ಟಕ, ಶತಕ, ತಾರಾವಳಿ, ಕಾಲಜ್ಞಾನ, ಉದ್ಧರಣೆ ವಾಚ್ಯ ಹೀಗೆ ಅನೇಕ ಪ್ರಕಾರಗಳು ಹುಟ್ಟಿಕೊಂಡವು.

ಜೀವನದ ಮೌಲ್ಯ, ರೀತಿ–ನೀತಿಗಳೇ ತತ್ವಪದಗಳಿಗೆ ವಿಷಯವಸ್ತುವಾಗಿ ಸೇರಿಕೊಂಡಿರುವುದನ್ನು ಗಮನಿಸಬಹುದು.

ಸುಶಿಕ್ಷಿತ ತತ್ವಪದಕಾರರ ರಚನೆಗಳಲ್ಲಿ ತರ್ಕಬದ್ಧ ಪ್ರತಿಪಾದನೆ, ತಾತ್ವಿಕ ಕಲ್ಪನೆಗಳ ನಿರೂಪಣೆ, ನಿರ್ದಿಷ್ಟ ರಾಗ ತಾಳಗಳ ಬಳಕೆಯಂಥ ಕೆಲವು ಗುಣಲಕ್ಷಣಗಳನ್ನು ಗುರುತಿಸಬಹುದು. ಸುಶಿಕ್ಷಿತರಲ್ಲವೆನಿಸಿಕೊಂಡವರೂ ಅನುಭವ ಜನ್ಯವಾಗಿ ತತ್ವಪದಕಾರರೆನಿಸಿಕೊಂಡಿದ್ದಾರೆ. ಸಂತರೆಂದು ಮಹಾತ್ಮರೆಂದು ಮನ್ನಣೆ ಗಳಿಸಿದ್ದಾರೆ.

ಕೌಟುಂಬಿಕ ಸಂಬಂಧ, ಗಂಡುಹೆಣ್ಣಿನ ಸಂಬಂಧ, ವ್ಯವಸಾಯದಂತಹ ಅನೇಕ ಜನಜೀವನದ ಅಭಿಭಾಜ್ಯ ಅಂಶಗಳು ತತ್ವಪದಗಳಲ್ಲಿ ಗೋಚರಿಸುತ್ತವೆ.

ವಚನಗಳು ಸಾಮಾನ್ಯವಾಗಿ ನಿದರ್ಶನಗಳನ್ನು ವಿವರವಾಗಿ ಕಟ್ಟಿಕೊಡುತ್ತಾ ಕೊನೆಗೆ ಒಂದು ತೀರ್ಮಾನವನ್ನು ಮುಟ್ಟಿದರೆ ತತ್ವಪದಗಳು ಪ್ರಾರಂಭದಲ್ಲೇ ಒಂದು ತೀರ್ಮಾನವನ್ನು ಮಂಡಿಸಿ ಅನಂತರ ಅದಕ್ಕೆ ಅಗತ್ಯವಾದ ನಿದರ್ಶನಗಳನ್ನು ನೀಡುತ್ತಾ ಹೋಗುತ್ತವೆ.

ತತ್ವ ಪ್ರತಿಪಾದಕರು ಒಂದು ಜಾತಿ ಜನಾಂಗಕ್ಕೆ ಸೀಮಿತವಾದವರಲ್ಲ. ಪರಸ್ಪರ ಸಹಬಾಳ್ವೆಯ ವಿಶಾಲ ಪರಿಕಲ್ಪನೆಯನ್ನು ಮುಸ್ಲಿಂ ಮತ್ತು ದಲಿತ ತತ್ವಪದಕಾರರ ರಚನೆಗಳಲ್ಲಿ ಕಾಣಬಹುದಾಗಿದೆ.

ತತ್ವಪದಗಳು ಕನ್ನಡದಲ್ಲಿ ಬಗೆಬಗೆಯ ಹೆಸರುಗಳಿಂದ ಬೆಳೆದುಕೊಂಡು ಬಂದಿವೆ. ಪರಮಾತ್ಮನ ಬಗೆಗಿನ ಅನುಭಾವ ಈ ಪದಗಳಲ್ಲಿ ವ್ಯಕ್ತಗೊಳ್ಳುವುದರಿಂದ ಇವುಗಳಿಗೆ 'ಅನುಭಾವ ಪದ'ಗಳೆಂದೂ ಏಕತಾರಿಯಂತಹ ವಾದ್ಯದೊಂದಿಗೆ ಸ್ವರವೆತ್ತಿ ಹಾಡುವುದರಿಂದ ಸ್ವರವಚನಗಳೆಂದೂ, ಅಂತರಂಗದ ಅರಿವಿನ ಮೂಲಭೂತ ತತ್ವಗಳನ್ನು ಒಳಗೊಂಡಿರುವುದರಿಂದ ತತ್ವಪದಗಳೆಂದೂ ಕರೆಯಲ್ಪಡುವ ಇವುಗಳು ಸಾಹಿತ್ಯದಲ್ಲಿ ಗಮನಾರ್ಹ ಕಾವ್ಯಪ್ರಕಾರವೆಂದೇ ಹೇಳಬಹುದು.

ತತ್ವಪದ ಪರಂಪರೆಯಲ್ಲಿ ರಾಮಪುರದ ಬಕ್ಕಪ್ಪ, ಸಾರವಾಡ ಚಿಕ್ಕಪ್ಪಯ್ಯ, ಮೈಲಾರದ ಬಸವಲಿಂಗ ಶರಣರು, ಕಡಕೋಳ ಮಡಿವಾಳಪ್ಪ, ಶಿಶುನಾಳ ಶರೀಫರು, ಮೇಟ್ನಳ್ಳಿ ಹಸನಸಾಬ, ಕೋಹಿನೂರ ಹಸನ್, ದೇಗಾವಿ ಹಜರತ್, ಮಂಜಿಲಾನ ಖಾದರ ಸಾಬ್, ಸಾವಳಗಿ ಮುಹಮ್ಮದ ಸಾಬ, ಸಾಲಗುಂದಿ ಗುರು ಖಾದರಿ ಮೊದಲಾದವರನ್ನು ಗುರುತಿಸಬಹುದು.

ಗ್ರಾಮ್ಯ ಭಾಷೆಯನ್ನು ಬಳಸಿ ತತ್ವಪದಕಾರರು ತಮ್ಮ ಅಂತರಂಗದ ಸೂಕ್ಷ್ಮ ಭಾವನೆಗಳನ್ನು, ಆರೋಗ್ಯಕರ ಪ್ರೇಮವನ್ನು, ಬ್ರಿಟಿಷರ ದಬ್ಬಾಳಿಕೆ ಮತ್ತು ಕ್ರೌರ್ಯದ ಬಗೆಗಿನ ವಿರೋಧವನ್ನು ಅಭಿವ್ಯಕ್ತಗೊಳಿಸಿದರು. ತಮ್ಮ ಸುತ್ತಮುತ್ತಲಿನ ಸಮುದಾಯದ ಸಂದರ್ಭಗಳಲ್ಲಿ ನಾಶಗೊಳ್ಳುತ್ತಿದ್ದ ಮನುಷ್ಯ ಸಂಬಂಧಗಳನ್ನು ಕುರಿತು ಅವರು ಪದ ಕಟ್ಟಿ ಹಾಡಿದರು.

ಉದಾಹರಣೆಗೆ ಕಡಕೋಳ ಮಡಿವಾಳಪ್ಪನವರ ತತ್ವಪದದ ಸಾಲಗಳನ್ನು ಗಮನಿಸಬಹುದು. ಅವು ಹೀಗೆ ಸಾಗುತ್ತವೆ:

**ಗಡಗಿ ತೊಳೆದು ಅಡಗಿ ಮಾಡಮ್ಮ**
**ಅನುಭಾವದಡುಗೆಯ ಮಾಡಿ ಎಡಿಯ ಮಾಡಮ್ಮ**
**ದೇವರಿಗೆಡಿಯ ಮಾಡಿ ಗಂಡಗುಣಿಸಮ್ಮಾ**
**ಕರ್ಮವೆಂಬ ಜೋಳ ಬೀಸವ್ವ ।**
**ನೀ ಧರ್ಮ ಜರಡಿಯಿಂದ ಹಿಟ್ಟ ಸೋಸವ್ವ**

**ನಿರ್ಮಳಾತ್ಮ ನೀರ ಹಾಕವ್ವಾ।**
**ನೀ ನೇಮದಿಂದ ಕಣಕ ನಾದವ್ವಾ –**

ಹೀಗೆ ಸಾಗುವ ಈ ಸಾಲುಗಳು ತತ್ವಪದದಲ್ಲಿ ದೇಹವನ್ನು ಗಡಿಗೆಗೆ, ಅನುಭಾವವನ್ನು ಅಡುಗೆಗೆ ಹೋಲಿಸಿದ್ದಾರೆ.

ತತ್ವಪದಗಳ ಪ್ರಕಾರದಲ್ಲಿ ಸಂತ ಶಿಶುನಾಳ ಶರೀಫ್ ಸಾಹೇಬರ ತತ್ವಪದಗಳು ಜನಪ್ರಿಯತೆಯ ಆಧಿಕ್ಯವನ್ನು ಪಡೆದಿವೆ. ಶರೀಫ ಸಾಹೇಬರ ತತ್ವಪದಗಳಲ್ಲಿ ಜೀವನ ಮತ್ತು ಅಧ್ಯಾತ್ಮ ಹಾಸುಹೊಕ್ಕಾಗಿರುವುದನ್ನು ಗಮನಿಸಬಹುದು. ಅವರ ತತ್ವಪದಗಳಲ್ಲಿರುವ ಜನಪದ ಸೊಗಡು ನಿತ್ಯ ಬದುಕಿನ ಜಂಜಡ, ನೋವುನಲಿವುಗಳ ಸೋದಾಹರಣ ಜನರ ಹೃದಯ ತಟ್ಟಿ ಮನಮುಟ್ಟಿ ತತ್ವಪದಗಳಿಗೊಂದು ಸಾರ್ಥಕತೆಯನ್ನು ಒದಗಿಸುವಲ್ಲಿ ಸಾಫಲ್ಯ ಪಡೆದಿವೆ. ತತ್ವಪದಕಾರರು ಬಳಸುವ ಭಾಷೆಯಲ್ಲಿ ಜನರಾಡುವ ಮಾತಿಗೆ ಕಾವ್ಯತ್ವವನ್ನು ತುಂಬಿದರು.

**ತಿಪ್ಪಣ್ಣ ತಾತಾನ ತತ್ವಪದದ ಕೆಲವು ಸಾಲುಗಳು:**

**ಎಲ್ಲಿಹಾನ ದೇವ ।ಎಲ್ಲಿಹಾನ।**
**ಈ ದೇಹದ ಗವಿಯೊಳು ಐದಾನ ॥ಪ॥**
**ನರರಿಗೆ ನರನು ಆಗ್ಯಾನು**
**ಬಲ್ಲಂಥ ಜ್ಞಾನಿಗೆ ಶಿವನಾಗ್ಯಾನ।**
**ಆರುಮಂದಿ ಒಡಲೊಳು ಐದ್ಯಾನ।**
**ಒಂಭತ್ತು ಬಾಗಿಲೋಳು ನಿಂತಾನ।**
**ಐದುವರ್ಣದ ಅರಿವೆ ಉಟ್ಟಾನ ।**
**ಆರು ಆಭರಣವ ತೊಟ್ಟಾನ ॥**
**ಹೂವಿನ ಹಾರವು ಭರಸ್ಯಾನ।**
**ಈ ಒಡಲೋಳು ಆತನು ಆಡತಾನ ॥**

**ಯಾಮಾರೆಪ್ಪನ ತತ್ವಪದವೊಂದರ ಕೆಲವು ಸಾಲುಗಳು:–**

**ತಿಳಿದು ನೋಡಲೋ ನಿನ್ನೊಳಗೆ ನೀನು । ತಿಳಿದು ನೋಡಲೊ**
**ಏಳು ನೆಲೆಗಳೇರಿ ನೋಡು ಇರುವ ಸ್ಥಾನ ತಿಳಿದು ನೋಡು**
**ಸ್ಥಾನವಿಲ್ಲದೆ ಕಾಣುತಿರುವ ಬೆಳಕಿನೊಳು ಆಡು ನೀನು ।**

ತತ್ವಪದಕಾರರಲ್ಲಿ ಮಹಿಳೆಯರೂ ಈ ಸಾಹಿತ್ಯ ಪ್ರಕಾರಕ್ಕೆ ಮತ್ತು ಅನುಭಾವದ ನೆಲೆಯಾಗಿ ತಮ್ಮದೇ ಕೊಡುಗೆ ನೀಡಿರುವುದು ಗಮನಾರ್ಹ. ಸಾಮಾನ್ಯ ಲೌಕಿಕ ಬದುಕಿನ ಲೋಕಾನುಭವಕ್ಕಿಂತ ವಿಭಿನ್ನ ನೆಲೆಗಳ ಸೂಕ್ಷ್ಮ ವಿವರಗಳನ್ನು ಬಿದನೂರಿನ ಗಂಗಮ್ಮ, ರಾಯಚೂರಿನ ಹನುಮಂತವ್ವ, ತಾವರೆಕೆರೆಯ ವೀರದಾಸಮ್ಮ, ಫೈಮುದಾ ಫಾತಿಮಾ, ಜತ್ತ ಶಿವಲಿಂಗವ್ವ ಮೊದಲಾದವರು ತಮ್ಮ ತತ್ವಪದಗಳಲ್ಲಿ ಸಾದರಪಡಿಸಿದ್ದಾರೆ. ತತ್ವಪದಗಾರ್ತಿಯರ ಮೇಲೆ ವಚನಕಾರರ ಪ್ರಭಾವವಿರುವುದನ್ನು ಗಮನಿಸಬಹುದು. ಫಾತಿಮಾ, ಹನುಮಂತವ್ವ, ರಾಚಮ್ಮನಂತಹ ತತ್ವಪದಗಾರ್ತಿಯರು

ಬಸವಕಲ್ಯಾಣದವರಾಗಿದ್ದು, ಅನುಭವ ಮಂಟಪದಲ್ಲಿ ಜರುಗುತ್ತಿದ್ದ ವಚನ ವಾಙ್ಮಯ ಹಾಗೂ ಅಲ್ಲಿ ನಡೆಯುತ್ತಿದ್ದ ಸಾಮಾಜಿಕ ಚಳವಳಿಯ ಪ್ರಭಾವ-ಪ್ರೇರಣೆಯಿಂದ ತತ್ವಪದಗಾರ್ತಿಯರಲ್ಲಿ ಮಾನಸಿಕ ಧೈರ್ಯ ತುಂಬಿತ್ತು.

ತತ್ವಪದಗಳು ಎಂದಾಗ ಪ್ರಸಕ್ತ ಕಾಲಮಾನದಲ್ಲಿ ನಮ್ಮ ಹೃನ್ಮನಗಳನ್ನು ತಕ್ಷಣವೆ ಸೋಕುವ ಮತ್ತು ಕಿವಿಗಳಿಗೆ ಸದಾ ರಿಂಗಣಿಸುವ ಭಾವ ಮೂಡಿಸುವುದು ಸಂತ ಶಿಶುನಾಳ ಶರೀಫರ ತತ್ವಪದಗಳು ಎಂದರೆ ಉತ್ಪ್ರೇಕ್ಷೆ ಎನಿಸದು. ಅವರ ಕೋಡಗನ ಕೋಳಿ ನುಂಗಿತ್ತ, ಬಿದ್ದೀಯಬ್ಬೆ ಮುದುಕಿ, ಗುಡಿಯ ನೋಡಿರಣ್ಣ, ಹಾಕಿದ ಜನಿವಾರವ, ಹಾವು ತುಳಿದೇನೆ, ಅಳಬೇಡ ತಂಗೀ, ಅಣ್ಣ ನೋಡೋಣು ಬಾರಾ, ಬರಕೋ ಪದ ಬರಕೋ, ಬಿದಿರು ನಾನಾರಿಗಲ್ಲದವಳು, ಎಲ್ಲರಂಥವನಲ್ಲ ನನ ಗಂಡ, ಕುಂಬಾರಾಕಿ ಈಕಿ ಕುಂಬಾರಾಕಿ, ಕೂಕೂ ಎನುತಿದೆ ಬೆಳವ, ಮೋಹದ ಹೆಂಡತಿ, ನಾನಾರೆಂಬುದು, ಸೋರುತಿಹುದು ಮನೆಯ ಮಾಳಿಗಿ, ಸುಗ್ಗಿ ಮಾಡೋಣ, ತರವಲ್ಲ ತಗಿ ನಿನ್ನ ತಂಬೂರಿ, ತೇರನೆಳೆಯುತಾರೆ ತಂಗಿ, ತೋಟವ ನೋಡಿರಣ್ಣ, ಸ್ಥಿರವಲ್ಲ ಕಾಯ ಮೊದಲಾದ ತತ್ವಪದಗಳು ಇಂದಿಗೂ ಜನಜನಿತವಾಗಿರುವುದು ಅವುಗಳ ಸರಳ ಭಾಷೆ, ಜೀವನಾನ್ವಯತೆ ಮತ್ತು ಅವುಗಳಲ್ಲಿನ ಜನಪದೀಯ ಗೇಯತೆ ಮೊದಲಾದ ಲಕ್ಷಣಗಳಿಂದ ಎನ್ನಬಹುದು.

ತತ್ವಪದಗಳು ಸಮಾಜದ ಅಂಕುಡೊಂಕುಗಳಿಗೆ ಕನ್ನಡಿಯಾಗಿ ಸದ್ಭವಿಷ್ಯಕ್ಕೆ ಮುನ್ನುಡಿ ಬರೆಯುವಲ್ಲಿ ಪ್ರಭಾವ ಬೀರಿರುವುದನ್ನು ನಾವು ಗಮನಿಸಬಹುದಾಗಿದೆ. ತತ್ವ ಎಂದರೆ ಅದು ಲೌಕಿಕ ಜಗತ್ತಿನ ವಸ್ತುವಿಷಯಗಳನ್ನು ಪಾರಲೌಕಿಕ ಮತ್ತು ಸಾರಸತ್ವದ ಸಾರ್ವಕಾಲಿಕ ನೆಲೆಯಲ್ಲಿ ಜನಸಾಮಾನ್ಯರಲ್ಲೂ ಜಾಗೃತಿ, ವಿವೇಕ, ಆಧ್ಯಾತ್ಮಿಕ ಚಿಂತನೆ ಒಟ್ಟಿನಲ್ಲಿ ಲೋಕಹಿತಕಾರಿ ಜನಸಮುದಾಯವನ್ನು ಸೃಷ್ಟಿಸುವ ಹಾಗೂ ಅದಕ್ಕಾಗಿ ಪ್ರೇರಣೆ ನೀಡುವ ಮಹತ್ಕಾರ್ಯವನ್ನು ನಿರ್ವಹಿಸುತ್ತದೆ.

ತತ್ವಪದಗಳ ಬಗ್ಗೆ ಇನ್ನಷ್ಟು ಪ್ರಚಾರ, ಅಧ್ಯಯನ ನಡೆಯಬೇಕಾದ ಅಗತ್ಯವಿದೆ. ಜನಮಾನಸದಲ್ಲಿ ಸಾತ್ವಿಕ, ತಾತ್ವಿಕ ನೆಲೆಗಟ್ಟನ್ನು ನಿರ್ಮಿಸಿ ಲೋಕಹಿತವನ್ನು ಸಾಧಿಸುವಲ್ಲಿ ತತ್ವಪದಗಳು ಪ್ರಭಾವಶಾಲಿಯಾಗಿವೆ. ಸಮಾಜದ ಓರೆಕೋರೆಗಳಿಗೆ ಕನ್ನಡಿ ಹಿಡಿಯುವ ಕೆಲಸವನ್ನಷ್ಟೇ ಮಾಡದೆ ತತ್ವಪದಗಳು ಮಾನವನ ಭವಿಷ್ಯದ ಭದ್ರತೆಗೆ ಬುನಾದಿಯನ್ನು ಹಾಕಿಕೊಡುವುದರಲ್ಲಿ ಸಂಶಯವಿಲ್ಲ.

**ಪರಾಮರ್ಶನ ಗ್ರಂಥಗಳು:**


1. ಜಗದೀಶ ಕೆರೆನಳ್ಳಿ, (2009), ತತ್ವಪದ ಅಧ್ಯಯನಗಳು: ವಿಮರ್ಶಾತ್ಮಕ ಸಮೀಕ್ಷೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
2. ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, (1997), ಗುರುಶಿಷ್ಯರ ತತ್ವಪದಗಳು, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.